**ಓ.ಎಸ್ಃ 474/2017**

ಪಿ. ಡಬ್ಲ್ಯೂ ಃ 02

**<u>ಸಾಕ್ಷಿಗೆ ದಿನಾಂಕ 04.07.2018 ರಂದು ಪ್ರಮಾಣ ವಚನ ನೀಡಲಾಯಿತು.</u>**

ನಾನು ಈ ದಾವೆಯಲ್ಲಿ ವಾದಿಪರ ಸಾಕ್ಷಿಯಾಗಿದ್ದು ನನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳು ಸತ್ಯ ಇರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

**<u>ಮುಂದುವರೆದ ವಿಚಾರಣೆಃ ವಾದಿ ಪರ ವಕೀಲರಿಂದ</u>**

ಪ್ರತಿವಾದಿ ಬರೆದುಕೊಟ್ಟಿರುವ ನಿಪಿ 1 ಮತ್ತು 2 ರ ದಿ. 27.10.2014 ರ ಪ್ರೊನೋಟ್ ಮತ್ತು ಹಣಸಂದಾಯ ರಸೀದಿಗೆ ಸಾಕ್ಷಿದಾರನಾಗಿ ಹಾಜರಿದ್ದು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯಲ್ಲಿನ ತಮ್ಮ ಸಹಿಯನ್ನು ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 1 ಬಿ ಮತ್ತು 2 ಬಿ ಎಂದು ಗುರುತಿಸಲಾಗಿರುತ್ತದೆ. ನನ್ನೊಂದಿಗೆ ಜಗದೀಶ್ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ನಟರಾಜು ಎಂಬುವವರು ಪತ್ರ ಬರೆದಿರುತ್ತಾರೆ. ಅದೇ ರೀತಿ ಪ್ರತಿವಾದಿ ತನ್ನ ಹೆಬ್ಬೆಟು ಗುರುತು ಮತ್ತು ಸಹಿಯನ್ನು 2 ದಾಖಲೆಗಳಿಗೆ ಹಾಕಿರುತ್ತಾರೆ.

ಪ್ರತಿವಾದಿಗಳು ಗೈರು ಹಾಜರು ಲಿಖಿತ ಹೇಳಿಕೆಯನ್ನು ಸಲ್ಲಿಸದೇ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ